# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/156/15-16

ದಿನಾಂಕ : 08-09-2016

ಉಪಸ್ಥಿತರು: ಶ್ರೀ ಲೋಕೇಶ್ ಪಿ.ಎನ್ (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀ ಬುಶಪ್ಪನವರ ತಿಮ್ಮಾರೆಡ್ಡಿ, ತಂದೆ ನಾಗಪ್ಪ<br>ಸಾ\|\|ದಮ್ಮೂರು ಗ್ರಾಮ, ತಾ\|\|ಬಳ್ಳಾರಿ<br><br>(ಶ್ರೀ ಟಿ ಪ್ರಕಾಶ್, ಶ್ರೀ ಟಿ ನೂರ್ ಬಾಷ ಹಾಗೂ<br>ಶ್ರೀ ಅನ್ವರ್ ಬಾಷ, ವಕೀಲರುಗಳು, ಬಳ್ಳಾರಿ) | 1. ತಹಶೀಲ್ದಾರರು, ಬಳ್ಳಾರಿ<br>2. ಕಂದಾಯ ನಿರೀಕ್ಷಕರು, ಕೋಳುರು<br>3. ಗ್ರಾಮ ಲೆಕ್ಕಾಧಿಕಾರಿಗಳು, ದಮ್ಮೂರು |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ದಮ್ಮೂರು | 340A/1a ಪೈಕಿ | 3.00 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ಕೋಳೂರು ಇವರ ಎಂ.ಆರ್ ನಂ 380/2006-07 ದಿನಾಂಕ: 10.05.2007 ಹಾಗೂ ತಹಶೀಲ್ದಾರರು, ಬಳ್ಳಾರಿ ಇವರ ಹಿಂಬರಹ ಸಂಖ್ಯೆ: ಕಂ/ಪಹಣಿ/446/2015-16 ದಿನಾಂಕ: 12.08.2015 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 11-03-2016, 20-05-2016, ಮತ್ತು 08-09-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಮತ್ತು ಅವರ ವಕೀಲರು ದಿನಾಂಕ: 09-09-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ದಮ್ಮೂರು ಗ್ರಾಮದ ಸ.ನಂ 340A/1a ವಿಸ್ತೀರ್ಣ: 3.00 ಎಕರೆ ಜಮೀನನ್ನು ಮೇಲ್ಮನವಿದಾರರು ನೊಂದಾಯಿತ ಕ್ರಯ ಪತ್ರ 1403/66-67 ದಿನಾಂಕ 27-06-1966 ರಲ್ಲಿ ಫಾತೀಮಾ ಬೀ ಗಂಡ ತಾಳೂರು ಮುಲ್ಲಾ ಮಾಬುಸಾಬ್ ಇವರಿಂದ ಖರೀದಿಸಿದ್ದು, ಸದರಿ ಕ್ರಯ ಪತ್ರದನ್ವಯ ಹಕ್ಕು ದಾಖಲಿಸುವ ಸಂಧರ್ಭದಲ್ಲಿ ಕಂದಾಯ ನಿರೀಕ್ಷಕರು, ಕೋಳೂರು ಇವರ ಎಂ.ಆರ್ ನಂ 380/2006-07 ದಿನಾಂಕ: 10-05-2007 ರ ಆದೇಶದಲ್ಲಿ ಮೇಲ್ಮನವಿದಾರರ ಜೊತೆ ಗುಲಾಮ ಹುಸೇನ ಶ್ಯಾಬಮ್ಮ ಗಂಡ ಗುಡುಸಾಬ್ ಎಂದು ಹೆಸರು ಜಂಟಿಯಾಗಿ ನಮೂದಾಗಿರುವುದನ್ನು ಪ್ರಶ್ನಿಸಿರುತ್ತಾರೆ.

ಮುಂದುವರೆದು ಪ್ರಕರಣದಲ್ಲಿನ ಲಭ್ಯದಾಖಲೆಗಳನ್ನು ಪರಿಶೀಲಿಸಲಾಗಿ, ಸದರಿ ಜಮೀನಿನ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಹಾಲಿ ಸರ್ವೆ ನಂಬರ್ ಗಳಲ್ಲಿಜಂಟಿಯಾಗಿ ಹೆಸರುಗಳಿದ್ದು, ವಾದಿಗಳು ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಪಹಣಿಯನ್ನು ಕೋರಿರುತ್ತಾರೆ. ವಾದಿಗಳು ಕೋರಿರುವಂತೆ ಬಳ್ಳಾರಿ ತಾಲ್ಲೂಕಿನ ದಮ್ಮೂರು ಗ್ರಾಮದ ಸ.ನಂ 340A/1a